ಪೊಲೀಸ್ ಇಲಾಖಾ.

ತಾರೀಖು 8ನೇ ಮಾರ್ಚೀ 1887.

ಬಳ್ಳೇ ಹೊನ್ನೂರು ಮತ್ತು ಯಡೆಹಳ್ಳಿ ಸ್ಟೇಷನುಗಳ ಸರಹದ್ದಿನ ವಳಗೆ ಯಿರತಕ್ಕ ಕಾಡಕೊಡಗಿ ಗ್ರಾಮದಲ್ಲಿನ ಚಂದಯ್ಯನ ಮನೆಯಿಂದ 1885ನೇ ಇಸವಿ ಮೇ 13ನೇ ತಾರೀಖಿನಲ್ಲಿ ಜೋರಿಯಿಂದ ವಯ್ಯೋಣಾವ ಸುಮಾರು 12 ವರುಷ ವಯಸ್ಸುಳ್ಳ ಗುತ್ತಿ ಯಂಬ ಹುಡುಗಿಯ ಪತ್ತೇ ವಿಷಯದಲ್ಲಿ ಸಾಧಕವಾದ ವರ್ತಮಾನ ಕೊಡುವಂಥಾವರಿಗೆ 50 ರೂಪಾಯಿ ಇನಾಂ ಕೊಡಲ್ಪಡುತ್ತೆ.

ಯಲ್. ರಿಕ್ಕೆಟ್ಸ್,
ಪೊಲೀಸ್ ಇನ್ಸ್ಪೆಕ್ಟರ್ ಜನರಲ್.

ಫಾರೆಸ್ಟ್ ಇಲಾಖಾ.

ತಾರೀಖು 23ನೇ ಮಾರ್ಚೀ 1887.

ಇದರಿಂದ ಸರ್ವರತಿಳುವಳಿಕೆ ಬಗ್ಗೆ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟುಗಳ ಉತ್ಪತ್ತಿ ಚಾಬತು ಯಿದ ರಡೀ ಕಂಡ ಮರಗಳು ಫಾರೆಸ್ಟ್ ಅಸಿಸ್ಟೆಂಟ್ ಕಂಸರ್‌ವೇಟರವರಿಂದ ಆಯಾತಾರೀಖುಗಳಲ್ಲಿ ಬಹಿರಂಗವಾದ ಹರಾಜುಮೂಲಕ ವಿಕ್ರ ಯಿಸಲ್ಪಡುತ್ತೆ.

ಡಿಪೋ ಹೆಸರು.	ಹರಾಜ್ ತಾರೀಖು.	ತೇಗದನಾಟಾ ಗಳು.	ಕಾಡುಮರದ ನಾಟಾಗಳು.	ತೇಗದ ಮತ್ತು ಕಾಡುಜಾತಿ ಕೂಚಗಳು.	ಷರಾ.
ಸೊರಬ ತಾಲ್ಲೂಕು ತೆಲಗದ್ದೆ ..	2ನೇ ಮೇ 1887	100	..	..	ಹೆಚ್ಚು ಕಡಿಮೆಯಾಗಿ.
ಸಿಕಾರೀಪುರ ..	7ನೇ ಡಿಟೋ	..	100	350	
ಶಿರಾಳಕೊಪ್ಪ ..	8ನೇ ಡಿಟೋ	..	150	..	
ಚನ್ನಗಿರಿ ..	13ನೇ ಡಿಟೋ	25	10	300	
ಆಯಿನೂರು ..	22ನೇ ಡಿಟೋ	150	400	100	
ಶಿವಮೊಗ್ಗಾ ..	24ನೇ ಡಿಟೋ	180	100	300	
ಕೊಪ್ಪದ ತಾಲ್ಲೂಕು ಕಣಬೂರು ..	28ನೇ ಡಿಟೋ	..	300	..	
ತರೀಕೆರೆ ತಾಲ್ಲೂಕು ಲಕ್ಕವಳ್ಳಿ ..	1ನೇ ಜೂ ಡಿಟೋ	2,200	400	600	

ಹರಾಜಿನ ಷರತ್ತುಗಳು—1873ನೇ ಇಸವಿ ಜೂ 12ನೇ ಮತ್ತು 20ನೇ ನಂಬರ್ ಮೈಸೂರು ಗೆಜೆಟಿನಲ್ಲಿ ಪ್ರಾಯಿಷ್ಮಾಡ ಲ್ಪಟ್ಟ ಪ್ರಕಾರ ಯಿರತಕ್ಕವು, ಮತ್ತು ಹರಾಜ್‌ಕಾಲದಲ್ಲಿ ವ್ಯೋದಲ್ಪಡುವದು.

ತಾರೀಖು 30ನೇ ಮಾರ್ಚೀ 1887.

ಇದರಿಂದ ಪ್ರಕಟಪಡಿಸುವದೇನಂದರೆ, ಮತ್ತೊಂದು ಹುಕುಂ ಕೊಡುವ ಪರಿಯಂತ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗೆ ಳಲ್ಲಿಯ ಇದರಡೀ ಕಂಡ ಡಿಪೋಗಳಲ್ಲಿ ಮರಗಳ ಹರಾಜು ಸಾಲೀಯಾನಾ ಇದರೆಡೀ ನಮೂದಿಸುವ ತಾರೀಖುಗಳಲ್ಲಿ ನಡಿಸಲ್ಪಡುವದು.

ಡಿಪೋ ಹೆಸರು.	ಸಾಲೀಯಾನಾ ಹರಾಜು ನಡಿಸುವ ತಾರೀಖು.
ತೆಲಗದ್ದೆ (ಅಜಮಾಯಿಷಿ ತರೀಕ್)	2ನೇ ಮೇ
ಷಿಕಾರಿಪುರ	7ನೇ ಡಿಟೋ
ಶಿರಾಳಕೊಪ್ಪ	8ನೇ ಡಿಟೋ
ಚನ್ನಗಿರಿ	13ನೇ ಡಿಟೋ
ಉಬ್ರಾಣಿ (ಅಜಮಾಯಿಷಿ ತರೀಕ್)	18ನೇ ಡಿಟೋ
ತರೀಕೆರೆ	20ನೇ ಡಿಟೋ
ಆಯಿನೂರು	22ನೇ ಡಿಟೋ
ಶಿವಮೊಗ್ಗ	24ನೇ ಡಿಟೋ
ಕಣಬೂರು	28ನೇ ಡಿಟೋ
ಲಕ್ಕವಳ್ಳಿ	1ನೇ ಜೂನ್.

ಯಲ್. ರಿಕ್ಕೆಟ್ಸ್,
ಫಾರೆಸ್ಟ್ಸ್ ವ ಪ್ಲಾಂಟೇಷನ್‌ಗಳ
ಇನ್‌ಸ್ಪೆಕ್ಟರ್ ಜನರಲ್.

ತಾರೀಖು 24ನೇ ಮಾರ್ಚೀ 1887.

ಇದರಿಂದ ಸರ್ವರ ತಿಳುವಳಿಕೆ ಬ್ಯೆ ಪ್ರಕಟಪಡಿಸುವದೇನಂದರೆ, ಚಾಮರಾಜನಗರದ ಫಾರೆಸ್ಟ್ಸುಗಳಲ್ಲಿ, ಮೇಕೆಗಳು ವಿನಾ ದನಗಳು ಮಾತ್ರ ಮೇಯುವ ಬಗ್ಯೆ ವಂದು ಕಾಲಾವಧಿಯಲ್ಲಿ ಅಂದರೆ ಜೂನ್ ಗುರ್ಯೇ ಲಾಗಾಯತು 1888ನೇ ಇಸವಿ ಜನವರೀ ಆಖೈರ್ ಪರಿಯಂತ ದರ ರಾಸು 1ಕ್ಕೆ ನಾಲ್ಕಾಣೆ ಪಾವತೀ ಮಾಡಿದ ಮೇಲೆ ಅಪ್ಪಣೆ ಕೊಡಲ್ಪಡುವದು, ಮತ್ತು ಆ ಬಗ್ಯಾಗಿ ಟಿಕೇಟ್‌ಗಳು ಕೊಡಲ್ಪಡುವದು. ವಂದು ವರುಷಕ್ಕಿಂತ ಕಂ ವಯಸ್ಸಿನ ಕರಗಳು ವಿನಾಯಿಸಲ್ಪಡತಕ್ಕವು. ಫಾರೆಸ್ಟ್ ಇಲಾಖೆಯವರು, ಈ ಇಸ್ತಿಹಾರ್‌ನಾಮೆಯ ಅಂತ್ಯಭಾಗದಲ್ಲಿ ಕಂಡ ವಿನಾಯಿತಿಗೆ ಸಂಬಂಧಪಟ್ಟ ಯಾವ ಭಾಗಗಳನ್ನಾಗಲೀ ಬಂದ್ ಮಾಡುವ ಮತ್ತು ಮೇಯುವ ಬಗ್ಯೆ ಅಪ್ಪಣೆ ಕೊಡಲ್ಪಟ್ಟ ರಾಸುಗಳ ಸಂಖೆಯನ್ನು ಗೊತ್ತು ಮಾಡುವ ಹಕ್ಕುದಾರೀಯನ್ನು ಸಹ ತಮ್ಮಲ್ಲಿಯೇ ಉಳಸಿಕೊಂಡಿರುತ್ತಾರೆ. ರಾಸುಗಳ ಮಂದೆಗಳು ಅವು ಯಾವ ಗ್ರಾಮಗಳಿಗೆ ಶೇರಿರುತವೋ ಅಂಥಾ ಗ್ರಾಮಗಳಿಗೆ ಸಮೀಪವಾದ ಬೇರೇ ಬೇರೆ ಪ್ರದೇಶಗಳಿಗೆ ಭಾಗಿಸಲ್ಪಡತಕ್ಕವು.

ಲೈಸೆನ್ಸ್ ಯಿಲ್ಲದೆ ಮೇಯುತ್ತಿರುವ ಯಾವ ದನಗಳಾಗಲಿ ದೊಡ್ಡಿಗೆ ದಾಖಲ್ಮಾಡಲ್ಪಟ್ಟು ಅವುಗಳ ಸ್ವಂತಗಾರರ ಮೇಲೆ ಫ್ಯಾಸಿ ಕ್ಯೂರ್ಷಯಾನೆ ಫಿರ್ಯಾದ್ ಮಾಡಲ್ಪಡತಕ್ಕದ್ದು.

ದನಗಳ ದೊಡ್ಡಿಬಗ್ಯಾಗಿ ಯಾವ ಯೇಮಾರಗಳಾದರೂ ಯಾವ ಸಂದರ್ಭಗಳಲ್ಲೂ ಕಡಿಯಲ್ಪಡಕೂಡದು, ಮತ್ತು ಆ ಬಗ್ಯಾಗಿ ಬೇಕಾಗುವ ತಮೂಂ ಬೊಂಬುಗಳೂ ದರ ಭಂಡಿ ಬೋಜಾ 1ಕ್ಕೆ ವಂದು ರೂಪಾಯಿ ಪ್ರಕಾರ ಫಾರೆಸ್ಟ್ ಇಲಾಖೇಯಿಂದ ಕ್ರಯಕ್ಕೆ ತೆಗದುಕೊಳ್ಳಲ್ಪಡತಕ್ಕದ್ದು, ಹಾಂಗೆ ಖರೀದಿ ಮಾಡಿದ ತರುವಾಯ ಅವುಗಳನ್ನ ಕಡಿದು ಸಾಗಿಸತಕ್ಕ ಲಾಗವಡು ಆಯಾ ಜನಗಳಿಗೆ ಶೇರಿರುತ್ತೆ. ಮುಳ್ಳು ಕಂಪೆಗಳು ಮುಫತ್ತಾಗಿ ತೆಗೆದುಕೊಳ್ಳಲ್ಪಡಬಹುದು.

ವಿನಾಯಿತಿಗಳು.

(1.) ಸೊಸಿನಾಟುವ ಬಗ್ಯಾಗಲೀ ಮತ್ಯಾವ ಇತರ ವಿಧವಾಗಿಯಾದರೂ ಪುನರಭಿವೃದ್ಧಿ ಮಾಡುವ ಬಗ್ಯಾಗಲೀ ಉಳಸಿಕೊಳ್ಳಲ್ಪಟ್ಟ ಅಂಥಾ ಪ್ರದೇಶಗಳಿಗೆ ದನಗಳು ಅವಕಾಶ ಕೊಡಲ್ಪಡದೆ ಯಿರುವಂಥಾ ಯಾವದಾದರು ಜಂಗಲೀ ಪ್ರದೇಶಗಳು.

(2.) ಫಾರೆಸ್ಟ್ ಆಫೀಸರರು, ಭೂಗುಣದ ದೆಶೇಯಿಂದಲಾಗಲೀ, ಫಾರೆಸ್ಟ್ ಬೆಳೆಯುವದರ ದೆಸೇಯಿಂದಲಾಗಲೀ ಯಾ ಯಾವದಾದರೂ ವಿಶೇಷ ಸಂದರ್ಭಗಳ ಆವಶ್ಯಕತೆಗೋಸ್ಕರವಾಗಲೀ ಯಾವ ಪ್ರದೇಶದಲ್ಲಿಯಾದರೂ ಮೇಯುವದನ್ನ ಅಡ್ಡೀ ಪಡಿಸುವದು ಉತ್ತಮವೆಂಬದಾಗಿ ಭಾವಿಸುವಂಥಾ ಪ್ರದೇಶಗಳು.